ನೋಡು, ಲಕ್ಷಗಟ್ಟಲೇ ಹೊಂದಿಸೋದು ಸುಲಭ ಏನಲ್ಲ, ಸ್ವಲ್ಪ ಅರ್ಥ ಮಾಡ್ಕೊ' ಪ್ರಿಯಾ, ಪ್ರಶಾಂತನನ್ನ ಕೇಳಿದ್ದಳು.

'ನನ್ನ ಹತ್ತಿರ ಎಲ್ಲಿಂದ ಬರತ್ತೆ, ನೀನೂ ಅರ್ಥ ಮಾಡ್ಕೊಂಡಿರೋದು ಅಷ್ಟರಲ್ಲೇ ಇದೆ' ಒರಟಾಗಿ ಹೇಳಿ ಎದ್ದು ಹೋಗಿದ್ದ.

'ಅದು ಸರಿನೇ ಬಿಡು, ಅರ್ಥ ಮಾಡ್ಕೊಳ್ಳೋಕೆ ಪ್ರಯತ್ನ ಪಟ್ಟಿದ್ದಿದ್ದರೆ ನಾವ್ಯಾಕೆ ಬೇರೆ ಆಗ್ತಿದ್ವಿ' ಎಂದು ಗೊಣಗಿ ಸಿಟ್ಟಿನಿಂದ ಎದ್ದು ಹೊರಗೆ ಬಂದವಳು ಹರಡಿದ್ದ ಕೆಸರಿನ ಮೇಲೆ ಜಾರಿ ಬಿದ್ದಳು. ಎರಡು ಮಣ್ಣಿನ ಕುಂಡಗಳು ಬಿದ್ದಿದ್ದವು. ಒಂದರಲ್ಲಿನ ಗಿಡ ಹೊರಗೆ ಬಂದಿತ್ತು. ಇನ್ನೊಂದರಲ್ಲಿ ಎಲೆಗಳು ತುಂಡಾಗಿದ್ದವು. ಸಾವರಿಸಿ ಎದ್ದು ನಿಲ್ಲುವಷ್ಟರಲ್ಲಿ ಮುಖ ಮೂತಿ, ಕೈ ಕಾಲು ಎಲ್ಲ ಮಣ್ಣು ತುಂಬಿಕೊಂಡಿದ್ದ ಸ್ನೂಪಿ ಅವಳ ಮೇಲೆ ಹಾರಿ ನೆಕ್ಕಲಾರಂಭಿಸಿತು.

ನೋವು, ಸಿಟ್ಟು, ಸಂಕಟ ತಡೆಯಲಾರದೆ ಪ್ರಿಯಾ, ಪ್ರಶಾಂತನ ಎದುರು ಧುಮುಗುಡುತ್ತಾ ನಿಂತಿದ್ದಳು.

'ನೋಡು, ಒಂದು ರೂಪಾಯಿಗೂ ಆದೋನಲ್ಲ ನೀನು. ನೀನೇ ಹೋಗ್ತಿದೀ ಅಂದಮೇಲೆ ಈ ನಾಯಿ ಖರ್ಚೂ ನನ್ಮೇಲೆ ಹಾಕಿ ಹೋಗ್ಬೇಡ ನೀನು. ಮೊದಲು ಕೊಡು ವಾಪಸ್ ಇದನ್ನ, ನನ್ ಜೀವ್ನ ಎಲ್ಲ ಇದೇ ಆಗೋಯ್ತು. ನಂಗೆ ಬೇಕಿಲ್ಲ ಈ ಜವಾಬ್ದಾರಿಗಳೆಲ್ಲ...'

ಸರಿ, ನಾಳೆ ವಾಪಸ್ ಕೊಡ್ತೀನಿ...' ಎಂದವನು ಎದ್ದು ಹೊರಟಿದ್ದ. ಸಂಜೆ ಮತ್ತೆ ಮೆಸೇಜ್. 'ಸ್ನೂಪಿ ಬಗ್ಗೆ ಮಾತಾಡಿದೀನಿ. ಸದ್ಯದಲ್ಲೇ ಕರ್ಕೊಂಡು ಹೋಗ್ತಾರೆ'.

ಓಕೆ ಎಂದು ಕಳಿಸಿದವಳಿಗೆ ಹೊಟ್ಟೆಯಲ್ಲೇನೋ ಸಂಕಟ.

ಈ ಗೋಳು ಸಾಕು. ಒಂದು ನಾಲ್ಕು ದಿನ ಬೇಜಾರಾಗತ್ತೆ. ಕೊಟ್ಟೇಬಿಡೋಣ ಎಂದುಕೊಂಡಳು.

ಸ್ನೂಪಿ ಅಂದು ಪೂರ್ತಿ ವಿಧೇಯ ವಿದ್ಯಾರ್ಥಿನಿಯ ಥರ ಅವಳ ಮುಂದೆ ಕೂತಿತ್ತು. ಎಲ್ಲೋ ಅಂಗಡಿಗೆಂದು ಹೋಗಿ ಬಂದರೂ ಮುದ್ದುಗುಮ್ಮನ ಹಾಗೆ ಮಂಚದ ಕೆಳಗಿಂದ ಮುಖ ಮಾತ್ರ ಈಚೆ ಹಾಕಿ ಅವಳನ್ನೇ ನೋಡುತ್ತಿತ್ತು.

ರಾತ್ರಿ ಅವಳ ಮಂಚದ ಬುಡದಲ್ಲೇ ಮಲಗಿ ಆಗಾಗ ಎದ್ದು ಅವಳನ್ನೇ ನೋಡುತ್ತಿತ್ತು. ಅವಳು ಯಾವ ಭಾವನೆಯೂ ನನಗೆ ತಾಕಲೇಬಾರದು ಎನ್ನುವಂತೆ ನಿರ್ಲಿಪ್ತವಾಗಿ ಮಲಗಿದ್ದಳು.

* * *

'ಕೋರ್ಟಿಂದ ಆರ್ಡರ್ ಬರತ್ತೆ ಈ ವಾರದಲ್ಲಿ, ಅಷ್ಟರಲ್ಲಿ ನಾನೂ ಬೇರೆ ಮನೆಗೆ ಶಿಫ್ಟ್ ಆಗಿಬಿಡ್ತೀನಿ. ಎಲ್ಲಾ ಸುಮಾರು ವರ್ಷದ ಮನೆ ಸಾಮಾನುಗಳು, ಸ್ವಲ್ಪ ಕೂತು ಡಿವೈಡ್ ಮಾಡ್ಕೊಳೋಣ' ಪ್ರಶಾಂತ ಮತ್ತೆ ಮೆಸೇಜ್ ಮಾಡಿದ್ದ.

ಸಂಜೆ ಅದೇ ಕೆಲಸ.

ಮಂಚ? ಸಾಗಿಸೋಕಾಗಲ್ಲ, ನೀನೇ ಇಟ್ಕೊ...

ಸೋಫಾ? ಪೂರ್ತಿ ಹಣ ನಾನು ಕೊಟ್ಟಿದ್ದು, ನಾ ತೊಗೊಂಡು ಹೋಗ್ತೀನಿ.

ಬೀರು? ಹೊಸ ಮನೇಲಿ ಕಬೋರ್ಡ್ ಇದೆ, ಬೇಡ...

ಪುಸ್ತಕಗಳು ಎಲ್ಲ ನಂದು, ನಾ ತೊಗೊಂಡು ಹೋಗ್ತೀನಿ. ನಿಂಗೇನಾದರೂ ಬೇಕಿರೋದು ತೊಗೊ....

ಟಿ.ವಿ ಹೇಗೂ ಎರಡಿದೆ, ಒಂದು ನೀ ತೊಗೊ, ಇನ್ನೊಂದು ನಂಗಿರಲಿ...

ಮೀಡಿಯೇಷನ್ ಇಲ್ಲದೇ ಮನೆ ಭಾಗವಾಗುತ್ತಾ ಇತ್ತು.

ಮುಂದಿನ ಎರಡು ದಿನದಲ್ಲಿ ಪ್ರಶಾಂತನ ಪ್ಯಾಕಿಂಗ್ ಮುಗಿದಿತ್ತು. ತಾನೂ ಕೈಜೋಡಿಸಿ ಒಂದಿಷ್ಟು ಸಹಾಯ ಮಾಡಿದ್ದಳು ಪ್ರಿಯಾ.

ಇನ್ನೇನಾದರೂ ಉಳಿದಿದೆಯಾ...? ಪ್ರಶಾಂತ ಕೊನೆಗೊಮ್ಮೆ ಎಲ್ಲ ಚೆಕ್ ಮಾಡುತ್ತಾ ಕೇಳಿದ.

ಸ್ನೂಪಿ...?

ಒಂದು ಕ್ಷಣ ಪ್ರಶಾಂತ, ಪ್ರಿಯಾ ಇಬ್ಬರೂ ಮೌನವಾದರು.

'ನಿಮ್ಮ ತಾಯಿ ಮನೇಲಿ ಬಿಡೋಕಾಗತ್ತಾ ನೋಡು....?' ಪ್ರಶಾಂತ ಸ್ನೂಪಿಯನ್ನೇ ನೋಡುತ್ತಾ ಹೇಳಿದ.

'ಅವರನ್ನೇ ನಾವು ನೋಡ್ಕೊಬೇಕು, ಹಾಗಾಗಿದೆ ಅಲ್ಲಿನ ಪರಿಸ್ಥಿತಿ, ಇನ್ನು ಈ ನಾಯಿನ ನೋಡ್ಕೊಳೋಕಾಗತ್ತಾ ಅವರಿಗೆ?'